**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ**

ಸಿ.ಸಿ. ನಂ.572/2025

| | | |
|---|---|---|
| ಸಾಕ್ಷಿದಾರರ ಹೆಸರು | ಕೃಷ್ಣ | ಸಿ.ಡಬ್ಲ್ಯು-8 |
| ತಂದೆಯ ಹೆಸರು | ನಾಗರಾಜ | ಪಿ .ಡಬ್ಲ್ಯೂ-2 |
| ವಯಸ್ಸು | 41 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಅಕ್ಕ ಸಾಲಿಗರು | ದಿನಾಂಕಃ |
| ವಾಸಃ | ಶಿವಮೊಗ್ಗ | 09.06.2026 |

**ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 299 ರಅಡಿಯಲ್ಲಿ ಸಾಕ್ಷ್ಯಾ ವಿಚಾರಣೆಃ- ಎಪಿಪಿ ರವರಿಂದಃ**

**1.** ನಿಪಿ-1 ರಲ್ಲಿನ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ನಕಲು ಪ್ರತಿಯಾಗಿರುವುದರಿಂದ ಸಾಕ್ಷಿಯ ಸಹಿಯನ್ನು ನಿಶಾನೆಯಾಗಿ ಗುರುತಿಸಿರುವುದಿಲ್ಲ.

**2.** ದಿನಾಂಕ 19.08.2015 ರಂದು ಸದರಿ ಸಹಿಯನ್ನು ಪರಮೇಶ್ ಯಾನೆ ಪ್ರಶಾಂತ್ ಎಂಬ ಆರೋಪಿತನ ಮನೆಯಾದ ಶಿವಮೊಗ್ಗದ ತುಂಗಾ ನಗರದಲ್ಲಿರುವ 1 ನೇ ಕ್ರಾಸ್ ನಲ್ಲಿ ಮಾಡಿದ್ದೇನೆ. ಆ ಸಂದರ್ಭದಲ್ಲಿ ನನ್ನೊಂದಿಗೆ ಚಾ.ಸಾ 6 ಮತ್ತು 7 ರವರು ಇದ್ದರು. ಆರೋಪಿತನ ಮನೆಯಲ್ಲಿ ಸಾಕಷ್ಟು ಬಂಗಾರ ಮತ್ತು ಆಭರಣಗಳು ಇದ್ದವು. ಅವುಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಸದರಿ ಆಭರಣಗಳನ್ನು ಆರೋಪಿತನು ಕಳುವು ಮಾಡಿ ತಂದು ಇಟ್ಟಿರುವುದಾಗಿ ತಿಳಿಸಿದನು. ನಂತರ ಪೋಲಿಸರು ಪಂಚನಾಮೆಯಡಿಯಲ್ಲಿ ಅಮಾನತ್ತು ಪಡಿಸಿಕೊಂಡರು.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.